ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–01

ಸಂಖ್ಯೆ:ಸಿ4(2):ಪ್ರೌಶಾಶಿ:ಬಡ್ತಿ:33:2009–10 ದಿನಾಂಕ:15–09–2012

ಸುತ್ತೋಲೆ

ವಿಷಯ: ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹ ಶಿಕ್ಷಕರು – ಗ್ರೇಡ್–2 ಹುದ್ದೆಗೆ ಬಡ್ತಿ ನೀಡುವ ಕುರಿತು

ಉಲ್ಲೇಖ: 1)ದಿನಾಂಕ:02–07–2012 ರ ಮಾನ್ಯ ಶಿಕ್ಷಣ ಇಲಾಖೆ ಕಾರ್ಯದರ್ಶಿಯವರ ಮೌಖಿಕ ಸೂಚನೆಯ ಮೇರೆಗೆ

2) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ4(7)ಪ್ರೌಶಿಹೆಶಿಸ್ಥ:72/2011–12 ದಿ:10–07–2012

3) ದಿನಾಂಕ:12–09–2012 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಉಪನಿರ್ದೇಶಕರು (ಆಡಳಿತ) ರವರ ಸಭೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಈ ಕಛೇರಿಯ ಸುತ್ತೋಲೆಯಲ್ಲಿ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತ ಪ್ರೌಢಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ನಿರ್ದೇಶನದಂತೆ ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ಹೆಚ್ಚುವರಿ ಹುದ್ದೆ ಸ್ಥಳಾಂತರಿಸುವ ಪ್ರಕ್ರಿಯೆಯನ್ನ ದಿನಾಂಕ:13–08–2012 ರೊಳಗೆ ಮುಕ್ತಾಯಗೊಳಿಸಿ , ನಂತರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹ ಶಿಕ್ಷಕರಾಗಿ ಮುಂಬಡ್ತಿಯನ್ನು ನೀಡಲು ಸೂಚಿಸಲಾಗಿತ್ತು.

ಪ್ರಸ್ತುತ, ದಿನಾಂಕ:12–09–2012 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಉಪನಿರ್ದೇಶಕರು (ಆಡಳಿತ) ರವರ ಸಭೆಯಲ್ಲಿ ಚರ್ಚಿಸಿದಂತೆ, ಕೆಲವು ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹ ಶಿಕ್ಷಕರಾಗಿ ಮುಂಬಡ್ತಿಯನ್ನು ನೀಡಿಲ್ಲದಿರುವುದು ಸಭೆಯಲ್ಲಿ ವ್ಯಕ್ತವಾಗಿರುತ್ತದೆ. ಆದ್ದರಿಂದ ಕೂಡಲೆ ಯಾವ ಜಿಲ್ಲೆಗಳಲ್ಲಿ ಮುಂಬಡ್ತಿ ಪ್ರಕ್ರಿಯೆಯನ್ನು ಚಾಲನೆ ಮಾಡಿರುವುದಿಲ್ಲ, ಅಂತಹ ಜಿಲ್ಲೆಗಳಲ್ಲಿ ಉಪನಿರ್ದೇಶಕರು ಕೂಡಲೆ ಮುಂಬಡ್ತಿ ಪ್ರಕ್ರಿಯೆ ಪ್ರಾರಂಭಿಸಿ ದಿನಾಂಕ:25–09–2012 ರೊಳಗೆ ಪೂರ್ಣಗೊಳಿಸುವುದು.

ಮುಂದುವರೆದು, ಈಗಾಗಲೆ ಮುಂಬಡ್ತಿ ಪ್ರಕ್ರಿಯೆಯನ್ನು ಪೂರ್ಣಗಳಿಸಿರುವ ಜಿಲ್ಲೆಗಳು ಹಾಗೂ ದಿನಾಂಕ:25–09–2012 ರೊಳಗೆ ಪೂರ್ಣಗೊಳಿಸುವ ಜಿಲ್ಲೆಗಳು ಮುಂಬಡ್ತಿ ಪ್ರಕ್ರಿಯೆ ಅಂಕಿ ಅಂಶಗಳೊಂದಿಗೆ ವರದಿಯನ್ನು ದಿನಾಂಕ:05–10–2012 ರೊಳಗೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು (ಪ್ರೌಢಶಿಕ್ಷಣ)

ಅಗತ್ಯ ಕ್ರಮಕ್ಕಾಗಿ:

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಕ್ರಮಕ್ಕಾಗಿ.

ಪ್ರತಿಯನ್ನು:

2. ವಿಭಾಗೀಯ ಕಾರ್ಯದರ್ಶಿಗಳು/ಸಹ ನಿರ್ದೇಶಕರು ಬೆಂಗಳೂರು ಮತ್ತು ಮೈಸೂರು ವಿಭಾಗ ಇವರಿಗೆ ಮಾಹಿತಿ ಮತ್ತು ಕ್ರಮಕ್ಕಾಗಿ
3. ಕಡತ ಪ್ರತಿ.